# ಸ್ವಾಮಿ ವಿವೇಕಾನಂದರ ಮಾನವೀಯತೆ

ಸ್ವಾಮಿ ಸುನಿರ್ಮಲಾನಂದ

**ಸ್ವಾಮಿ ವಿವೇಕಾನಂದರ ಮಾನವೀಯತೆಯ ಕಲ್ಪನೆ ಆಧ್ಯಾತ್ಮಿಕ ಹಿನ್ನಲೆಯುಳ್ಳದ್ದು ಎಂಬುದನ್ನು ಪ್ರತಿಪಾದಿಸುತ್ತಾರೆ ಸ್ವಾಮಿ ಸುನಿರ್ಮಲಾನಂದರು. ರಾಮಕೃಷ್ಣ ಮಹಾಸಂಘದ ಆಂಗ್ಲಪತ್ರಿಕೆಯಾದ "ಪ್ರಬುದ್ಧಭಾರತ" ದ ಸಂಪಾದಕರಾಗಿದ್ದ ಇವರು ಈಗ ಬೇಲೂರು ಮಠದ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿದ್ದಾರೆ.**

## ಕರೆದರೆ ಬರಬಾರದೇ ?

ಇಂದಲ್ಲ ನಾಳೆ ಹೊಸಬಾನ ತೆರೆ ಸರಿದೀತು
ಕರಗೀತು ಮುಗಿಲ ಬಳಗ;
ತಂದೀತು ಸೊದೆಯ ಮಳೆ ತುಂಬೀತು ಎದೆಯ ಹೊಳೆ
ತೊಳೆದೀತು ಒಳಗು ಹೊರಗ!

ಆಸೆ! ಅನಂತ, ಸೀಮಾಹೀನ ಆಸೆ! ಕತ್ತಲು ಕಳೆದು ಬೆಳಕು ಹರಿದು ಧನ್ಯತೆ ಬರಲಿದೆ ಎಂಬ ಆಕಾಂಕ್ಷೆ! ಅಂಬಿಕಾತನಯ ದತ್ತರ "ಅಮೃತವಾಣಿ"ಯ ಅಮೃತ ಎದೆಯಿಂದಲೆದೆಗೆ ಹರಿದು ಎಲ್ಲೆಲ್ಲೂ ಶಾಂತಿ ತರಲಿದೆ ಎಂಬ ಹೆಬ್ಬಯಕೆ. ಆದರೇನು! ಬಯಕೆಗಳು ಪಕ್ಕಿಗಳಲ್ಲ! ಆಹ್! ಹಕ್ಕಿಗಳಾಗಿದ್ದರೆ! ಅವು ಹಾರಿ ಹಾರಿ ದಿಗಂತ ದಾಚೆ ತಲುಪಿ ಮತ್ತೂ ಹಾರಿ ಅನಂತದಾಚೆ ತಲುಪಿ ಅನಂತ ದಾಚೆಗಿನ ನಿತ್ಯದ ಕಾಲು ಹಿಡಿದು ಅಮೃತ ಸೇಚನೆಗೆಂದು ಆಹ್ವಾನಿಸುತ್ತಿದ್ದವೇನೋ! ಬೇಕಿಲ್ಲ. ಆಸೆಗಳು ಹಕ್ಕಿಗಳಾಗಬೇಕಿಲ್ಲ. ಆಸೆಗಳು ಒಳಹೊಕ್ಕಬೇಕು. ಅಂದರೆ? ಎದೆಯೊಳಗಿನ ಅಮೃತ ದೆಡೆಗೆ ಧಾವಿಸಬೇಕು. ಅಳಬೇಕು. ಕೂಗಿ ಕರೆಯಬೇಕು.

"ನಾವು ಕರೆಯಲಿಲ್ಲವೇ? ಈ ಯುಗದ ಆದಿ ಸಹಸ್ರಮಾನದ ಸಂಧ್ಯೆಯಲ್ಲಿ ಶಾಂತಿ ಭಂಗವಾದಾಗ ರೋದಿಸಲಿಲ್ಲವೇ? ಶಾಂತಿಯ ಆಸೆ ಸಮುದ್ರದ ಅಲೆಗಳಂತೆ ಏಳಲಿಲ್ಲವೇ?" "ಸಮಯ ಬರ ಬೇಕು!" "ಮತ್ತೆಂದು ಆ ಸಮಯ? ಮತ್ತೊಂದು ಸಹಸ್ರಮಾನ ಕಣ್ಣೀರು ಕೋಡಿಯಾಗಿ ಹರಿಯಿತಲ್ಲ! ವಂಶಗಳೇ ನಿರ್ವಂಶ ವಾದವಲ್ಲ! ಸಹಸ್ರ ಸಹಸ್ರ ನಾರಿಯರು ಅಪಮಾನಿತರಾದರಲ್ಲ! ನಾವಾಗ ಕರೆಯಲಿಲ್ಲವೇ? ಈ ದುಃಖ, ಈ ಸಂಕಟ ದೂರಾಗ ಲೆಂದು ಬೇಡಲಿಲ್ಲವೇ?"

"ಬೇಡಿದಿರಿ, ನಿಜ. ಇದೇ ಅಂತರಂಗ ಶುದ್ಧಿ. ಇದೇ ಬಹಿರಂಗ ಶುದ್ಧಿ! ಇದೇ ನಮ್ಮ ಕೂಡಲ ಸಂಗಮನೊಲಿಸುವ ಪರಿ! " "ಒಲಿದನೆಲ್ಲಿ?" "ಒಲಿದುದೇನೋ ಸತ್ಯ! ಚಿರಸತ್ಯ! ಕಳೆದ ಸಹಸ್ರಮಾನದ ಸಂಧ್ಯೆಯಲ್ಲಿ ಭಾರತದ ಮಣ್ಣಿನಲ್ಲಿ ಕಾಮಧೇನುವ ಕಂಡು ಭಿಕ್ಷಾನ್ನವುಂಡ ಜಗದೀಶ್ವರನ ಆಗಮನವಾಯಿತಲ್ಲ! ತಿಳಿ ಯದೇ? ಹಿಂದಿದ್ದ ದುಃಖ ಈಗಿದೆಯೇ? ಈಗ ಉಪ್ಪಿಗಾಗಿ ಹತ್ತು ಮೈಲು ನಡೆಯಬೇಕಿದೆಯೇ? ನಿನ್ನದೇ ದೇಶದಲ್ಲಿ ಉಸಿ ರಾಡಲು ಅನುಮತಿ ಪಡೆಯಬೇಕಿದ್ದ ಸ್ಥಿತಿ ಈಗಿದೆಯೇ? ಇಲ್ಲಿನ ಮನುಷ್ಯನೆಂದರೆ ಹೀನ ಪ್ರಾಣಿಗಳಿಗಿಂತ ಹೀನನೆಂಬ ವಿದೇಶೀ ಭಾವನೆಗಳು ಇಂದಿವೆಯೇ? ಏಳು ಏಳೆನ್ನ ಸೋದರನೇ! ಮುಂಬೆಳಕು ಹರಿಯುತಿಹುದು! ಚೈತನ್ಯದೇವನುದಯಿಸಿಹನು! ಕಣ್ತೆರೆದು ಶರಣು ಶರಣೆನ್ನು!"

"ಹಾಗಾದರೆ ಭಾರತದ ವಿಗತ ಸಹಸ್ರಾಬ್ದದ ಸಂಕಟಗಳು ಇನ್ನಿಲ್ಲವೇ? ಒಂದೇ ರಾತ್ರಿ ಮೂರು ಲಕ್ಷ ಹಿಂದೂಗಳನ್ನು ಸಂಹ ರಿಸಿದ ಸೈನಿಕರು ಇನ್ನಿಲ್ಲವೇ? ನಮ್ಮ ಕಂಬನಿಯ ಕರೆ ಅನಂತದ ಎದೆಯನ್ನು ತಟ್ಟಿದೆಯೇ? ನಾವಿನ್ನು ಜಾತಿ-ಮತ, ಮೇಲು-ಕೀಳು, ದೀನ-ಧನಿ ಮುಂತಾದ ಭೇದಗಳಿಂದ ಮುಕ್ತರೇ?..... ನಾವು ಮನುಷ್ಯರೇ?..... ನಾವು ಮನುಷ್ಯರೇ?...... ನಮ್ಮ ಭಿಕಾರಿ ಗಳಂತಹ ದೈನ್ಯ, ಪರಾಧೀನತೆಯ ಅಪಮಾನ, ಚಿರ ದೌರ್ಜನ್ಯದ ಸಂಕಟ ಎಲ್ಲವೂ ಇನ್ನಿಲ್ಲವೇ?"

"ಇಲ್ಲ! ಇನ್ನಿಲ್ಲ! ಎದ್ದೇಳು ಪ್ರಿಯ ಭಾರತೀಯ! ಇನ್ನು ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ, ನಾವು ಮನುಜರು! ನಾವು ಮನುಜರು!"

— — — — —

**ಮಾನವನು ಎಲ್ಲ ಪ್ರಾಣಿಗಳಿಗಿಂತಲೂ ಎಲ್ಲ ದೇವತೆಗಳಿಗಿಂತಲೂ ಶ್ರೇಷ್ಠನು. ಅವನಿಗಿಂತ ಶ್ರೇಷ್ಠರಾದವರು ಯಾರೂ ಇಲ್ಲವೇ ಇಲ್ಲ.**

ಸ್ವಾಮಿ ವಿವೇಕಾನಂದ

## ಮನುಷ್ಯನೇನು ಸಾಮಾನ್ಯನೇ!

ಜನ್ಮತಾಳುವುದು, ಶಾಲೆಗೆ ಹೋಗುವುದು, ಕಾಲೇಜಿನಲ್ಲಿ ವ್ಯಾಸಂಗ, ನೌಕರಿ, ಸಂಸಾರ, ಮೃತ್ಯು—ಇಷ್ಟೇಯೇ ನಮ್ಮ ಈ ಮನುಷ್ಯತ್ವ ಎಂಬುದು? ಇದು ಒಂದು ಚಿಕ್ಕ ವರ್ತುಲ ಮಾತ್ರವೇ? ಶ್ರೀಮದ್ಭಾಗವತದಲ್ಲಿ ಭಗವಂತನ ವಿರಾಟ್‌ರೂಪವನ್ನು ಶ್ರೀಶುಕದೇವನು ವರ್ಣಿಸುತ್ತಾನೆ (ಶ್ರೀಮದ್ಭಾಗವತ ೨.೧.೨೬-೩೮): ಸೂರ್ಯಚಂದ್ರರೇ ಭಗವಂತನ ಕಂಗಳು, ದಿಕ್ಕುಗಳೇ ಅವನ ಶರೀರ, ಅವನಿಗೆ ಆದ್ಯಂತಗಳಿಲ್ಲ, ಅವನಿಗೆ ಮೃತ್ಯುವೆಂಬುದಿಲ್ಲ. ಇಂತಹ ವಿರಾಟ್‌ರೂಪಿ ಭಗವಂತ ಎಲ್ಲಿದ್ದಾನೆ? ಮನುಜೋ

ನಿವಾಸಃ "ಮನುಷ್ಯನೇ ಅವನ ನಿವಾಸಸ್ಥಾನ." ಈ ಐದಾರಡಿಯ, ಸುಖದುಃಖಗಳೆಂಬ ಅಲೆಗಳು ತುಂಬಿದ ಸಂಸಾರಸಮುದ್ರದಲ್ಲಿ ಈಜುತ್ತಿರುವ, ಅಸಹಾಯಕವೆಂದು ತೋರುವ, ಜೀವದಲ್ಲಿ ಸ್ವಯಂ ಭಗವಂತನೇ ನಿವಾಸಿಸುತ್ತಿದ್ದಾನೆ! ಎಂಥಾ ವಿಪರ್ಯಾಸ! ಒಂದೆಡೆ ರೋಗ-ರುಜಿನ-ದುಃಖ-ಶೋಕಾದಿಗಳ ಸರಮಾಲೆ, ಮತ್ತೊಂದೆಡೆ ದಿವ್ಯ ಸ್ವರೂಪಿಯ ಅತಿಥಿಶಾಲೆ! ನಮ್ಮ ಶರೀರದ ಈ ವೈಚಿತ್ರ್ಯಕ್ಕೆ, ಮನಸ್ಸಿನ ಈ ವೈಚಿತ್ರ್ಯಕ್ಕೆ ಏನು ಹೇಳೋಣ!

ಭಗವಂತ ನಮ್ಮೊಳಗೇ ಇದ್ದರೂ ಕಂಗಾಲಾಗಿದ್ದೇವೆ. ಸರ್ವಶಕ್ತನೇ ನಮ್ಮೊಳಗಿದ್ದರೂ ಅಸಹಾಯಕರಾಗಿದ್ದೇವೆ, ದೀನರಾಗಿದ್ದೇವೆ. ಈ ಸರ್ವಶಕ್ತ ನಮ್ಮೊಳಗಿರುವುದು ಹಾಗಾದರೆ ಬರಿಯ ಕಲ್ಪನೆಯೇ? ಕಲ್ಪನೆಯಾಗಿದ್ದರೆ ನಮ್ಮ ಅಸ್ತಿತ್ವವೇ ಇರುತ್ತಿರಲಿಲ್ಲ! ದಯವಿಟ್ಟು ಚಿಂತಿಸಿ ನೋಡಿ. **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ** | (ಭಗವದ್ಗೀತೆ.) **ಈಶಾವಾಸ್ಯಮಿದಂ ಸರ್ವಂ** | ಇಷ್ಟು ದೊಡ್ಡ, ಪರಮಾದ್ಭುತ ಶಕ್ತಿಸಂಪತ್ತು ನಮ್ಮೊಳಗಿದ್ದರೂ ನಾವೇಕೆ ದೀನರಾಗಿದ್ದೇವೆ? ಅಸಾಮಾನ್ಯನಾದ, ವಿಶ್ವವನ್ನೇ ಜಯಿಸಬಲ್ಲ ಮನುಷ್ಯ ಅಸಹಾಯನಾಗಿ "ಹೋ" ಎಂದು ಅಳುತ್ತಾ ಕೂರಲು ಕಾರಣ ಅಜ್ಞಾನವೇ! ಎಲ್ಲವನ್ನೂ ಮರೆತರೂ ಒಂದು ಮಾತನ್ನು ಮಾತ್ರ ಮರೆಯದಿರೋಣ—"ನಾವು ಸಾಧಾರಣರಲ್ಲ. ನಮ್ಮೊಳಗೆ ಅನಂತ ಶಕ್ತಿಯಿದೆ." ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರೇ, ಕಾರ್ಖಾನೆಯಲ್ಲಿ ಕೆಲಸ ಮಾಡುವವರೇ, ಗೃಹಿಣಿಯರೇ, ಬಾಲಕ-ಬಾಲಕಿಯರೇ, ಬ್ಯಾಂಕಿನ ಸೇವೆಯಲ್ಲಿರುವವರೇ, ಸೇವಾನಿವೃತ್ತರೇ, ವ್ಯವಸಾಯಿಗಳೇ— ನಿಮ್ಮ ನಿಮ್ಮ ಕರ್ತವ್ಯಗಳು ಬೇರೆಯಾದರೂ ಸಾಮರ್ಥ್ಯಗಳು ಬೇರೆಯಾದರೂ ನಿಮ್ಮೊಳಗೆ ದಿವ್ಯಾತಿದಿವ್ಯ ಶಕ್ತಿಯಿದೆ. ನೀವು ನಿಶ್ಶಕ್ತರಲ್ಲ, ಹೀನ-ದೀನರಲ್ಲ! ಇದೇ ದಿವ್ಯವಾಣಿ, ಈ ಯುಗದ ವಾಣಿ. ಇದನ್ನು ಅರಿಯುವುದು ನೈಜ ಮಾನವೀಯತೆ.

ಕಳೆದ ಸಹಸ್ರಮಾನದಲ್ಲಿ ಭಾರತ ತನ್ನದೇ ಆದ ಈ ಮಹಾನ್ ಆವಿಷ್ಕಾರವನ್ನು ಮರೆತು ಕುಳಿತಿತ್ತು! ಶರೀರದೊಳಗೆ ಮನಸ್ಸು, ಮನಸ್ಸಿನೊಳಗೆ ಪರಮಾದ್ಭುತ ಆತ್ಮ—ಈ ತತ್ತ್ವವನ್ನು ಭಾರತ ಮರೆತಿತ್ತು. ಅದನ್ನು ಪ್ರಕಾಶಪಡಿಸದೇ ಹೋದುದೇ ನಮ್ಮೆಲ್ಲ ದುಃಖ ಕಷ್ಟಗಳಿಗೆ ಮೂಲಕಾರಣ. ಸಹಸ್ರ ವರ್ಷಗಳ ದಾಸ್ಯದ ಕಗ್ಗತ್ತಲೆ ಕಳೆದು, ಆತ್ಮಜ್ಯೋತಿಯ ಬೆಳಕನ್ನು ಮತ್ತೊಮ್ಮೆ ನಮಗೆ ನೀಡಿದವರು ಸ್ವಾಮಿ ವಿವೇಕಾನಂದರು. ಅವರು ನರೇಂದ್ರರು - ನರದೇವರು. ನರರ ಸೂರ್ಯರು. ಯಾವುದೋ ಅಜ್ಞಾತ ಕಾರಣದಿಂದಾಗಿ ವಿವೇಕವನ್ನು ಕಳೆದುಕೊಂಡಿದ್ದ ನರರಿಗೆ ವಿವೇಕದ ಸೂರ್ಯನಂತೆ ಬೆಳಕು ನೀಡಿದವರು. ಅವರು ನಮ್ಮವರು ! ಮನುಷ್ಯರವರು !

## ಅಸಾಮಾನ್ಯನಲ್ಲಿ ಸಾಮಾನ್ಯತೆಯೇಕೆ ?

ಮುದುಕ, ಭಿಕ್ಷಾರ್ಥಿ, "ಎರಡು ಕಾಸು ಕೊಡಿ, ಎರಡು ದಿನದಿಂದ ಊಟವಿಲ್ಲ," ಎಂದು ಗೋಗರೆಯುತ್ತಾನೆ. ಚಿಕ್ಕ ಮುರುಕು ಗುಡಿಸಿಲೇ ಅವನ ನಿವಾಸ. ಪಕ್ಕದಲ್ಲಿ ಭವ್ಯ ಬಂಗಲೆ. ಅವನ ತಮ್ಮನದು. ಭಿಕ್ಷೆ ಬೇಡುತ್ತ ಬೇಡುತ್ತ ಮುದುಕನಿಗೆ ಒಂದೇ ಕೆಲಸ, ತಮ್ಮನನ್ನು ನಿಂದಿಸುವುದು. ಅಸಾಧಾರಣ ಈರ್ಷ್ಯೆ.

ಮುದುಕನ ತಮ್ಮನ ಮಾತು ಕೇಳಿ : "ನನಗೆ ಹೇಳಿ ಹೇಳಿ ಸಾಕಾಯಿತು! ನಾವು ಚಿಕ್ಕವರಾಗಿದ್ದಾಗ ನಮ್ಮ ತಂದೆ ತಮ್ಮ ಜಮೀನನ್ನು ಎರಡು ಭಾಗ ಮಾಡಿದರು. 'ಈ ಜಮೀನಿನಲ್ಲಿ ಸಂಪತ್ತಿದೆ; ಮಕ್ಕಳೇ, ನೀವು ಅದರ ಸದ್ವ್ಯವಹಾರ ಮಾಡಿಕೊಳ್ಳಿ' ಎಂದು ಹೇಳಿ ಹೋದರು. ನಾನು ಜಮೀನಿನಲ್ಲಿ ಸಮಯಕ್ಕೆ ಸರಿಯಾಗಿ ಉತ್ತು ಬಿತ್ತು ಹಣವಂತನಾದೆ. ಅಣ್ಣ 'ಹಣ ಇದೆ, ಸಂಪತ್ತಿದೆ ' ಎಂದು ಎರಡು ದಿನ ಕೆತ್ತಿ ಕೆತ್ತಿ ಹುಡುಕಿದ. ಸಿಗದೇಹೋದಾಗ ಈ ಅವಸ್ಥೆಗೆ ಬಂದಿದ್ದಾನೆ. ನನ್ನ ಹಣ ಮುಟ್ಟುವುದಿಲ್ಲ, ಜಮೀನಿಗೆ ಕೈಹಾಕಲು ಬಿಡುವುದಿಲ್ಲ—ಈ ರೀತಿ ಕಷ್ಟಪಡುತ್ತಾನೆ." ನಮ್ಮ ಸಾವಿರ ವರ್ಷಗಳ ದುಃಖ ದೌರ್ಮನಸ್ಯಗಳಿಗೆ ಕಾರಣ, ಭಾರತದ ಮಣ್ಣಿನಲ್ಲಿ ಕಾಮಧೇನುವನ್ನು ಕಾಣದೇ ಹೋದದು. ನಮ್ಮ ವ್ಯಕ್ತಿಗತ ಜೀವನಗಳಲ್ಲಿ ದುಃಖಕಷ್ಟಗಳಿರಲು ಕಾರಣ ನಮ್ಮೊಳಗಿನ ಕಾಮಧೇನುವನ್ನು ಕಡೆಗಣಿಸಿರುವುದು. ತಾವು ಸ್ವಯಂ ಭಾರತದ ಕಷ್ಟಗಳನ್ನು ತಮ್ಮ ಮೇಲೆ ಆರೋಪಿಸಿಕೊಂಡು ಹಗಲಿರುಳೂ ಶ್ರಮಿಸಿ ದೇಶದ ಜನತೆಗೆ, ತನ್ಮೂಲಕ ವಿಶ್ವದ ಜನತೆಗೆ ಮಾನವರಾಗಲು ಹೇಳಿದರು ಸ್ವಾಮಿ ವಿವೇಕಾನಂದರು. "Be men!.... I want men!" ( ಮನುಷ್ಯರಾಗಿ, ನನಗೆ ಮನುಷ್ಯರು ಬೇಕು) ಎನ್ನುತ್ತಿದ್ದರು. ಮನುಷ್ಯರಾಗಲು ಮತ್ತೆ ಮತ್ತೆ ಕರೆ ನೀಡಿದರು.

## ನಾವು ಮನುಷ್ಯರಲ್ಲವೇ?

ಹಾಗಾದರೆ ನಾವೆಲ್ಲರೂ ಮನುಷ್ಯರಲ್ಲವೇ? ಅವಶ್ಯಕವಾಗಿ ಮನುಷ್ಯರು. ಅದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ನಮ್ಮಲ್ಲಿ ಹೆಚ್ಚಿನವರಿಗೆ ನಾವು ಮನುಷ್ಯರಾದುದೇಕೆ, ಮನುಷ್ಯರ ಕರ್ತವ್ಯವೇನು— ಇವುಗಳು ತಿಳಿಯವು. ತಿಳಿದಿದ್ದರೂ ಅತ್ತ ಮನನೀಡುವ ಇಚ್ಛೆಯಿರದು. ತಾತ್ಪರ್ಯವಿಷ್ಟು. ಮನುಷ್ಯರಾಗಿ ಹುಟ್ಟಿ, ರೋಗ ರುಜಿನಗಳನ್ನು ಅನುಭವಿಸಿ ನಿರ್ಗಮಿಸುವುದೇ ಉದ್ದೇಶವಲ್ಲ. ನಮ್ಮ ಉದ್ದೇಶ ಕೃಷಿ ಮಾಡುವುದು. ಮನುಷ್ಯನೆಂದರೆ ಕೇವಲ ಶರೀರವಷ್ಟೇ ಅಲ್ಲ. ಮನುಷ್ಯನೆಂಬ ಜೀವಿಗೆ ಒಂದು ಸೂಕ್ಷ್ಮ ಶರೀರವಿದೆ, ಒಂದು ಆತ್ಮವಿದೆ. ಈ ಆತ್ಮವೇ ಸತ್ಯ, ಉಳಿದುದೆಲ್ಲ ಇಂದಿವೆ, ನಾಳೆಯಿಲ್ಲ. ಹಾಗೆಂದು ನಾವು ಹತಾಶರಾಗಬೇಕಿಲ್ಲ. ನಮ್ಮ ಒಳಗಿರುವ ಪರಮಾದ್ಭುತ ಚೈತನ್ಯವು ಸುಪ್ತಾವಸ್ಥೆಯಲ್ಲಿದೆ. ಅದನ್ನು ವ್ಯಕ್ತಗೊಳಿಸಬೇಕು. ಅದು ಜಾಗೃತವಾದರೆ ಬಂಧನದಿಂದ ಮುಕ್ತಿ, ಶಾಶ್ವತವಾದ ಆನಂದ. ಈ ಆತ್ಮಜಾಗೃತಿಗೆಂದೇ ಕೃಷಿ ಮಾಡಬೇಕು. ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆಯೇ ಈ ಕೃಷಿ. ಇದರ ಮೂಲಕ ನಮ್ಮ ಆಂತರಿಕ ದಿವ್ಯತೆಯು ವ್ಯಕ್ತವಾಗಿ ನಾವು ನಿಜವಾದ ಮಾನವರಾಗುತ್ತೇವೆ. ಈ ರೀತಿ ನೈಜ ಮನುಷ್ಯತ್ವವನ್ನು ಪಡೆಯುವುದೇ ಮಾನವೀಯತೆ.

## ಮಾನವೀಯತೆಯ ಮಹಾಮಂತ್ರ

ಹಾಗಾದರೆ ಮಾನವೀಯತೆ ಎಂದರೇನು? ಶಬ್ದಕೋಶದ ಮಾತಿನಲ್ಲಿ, "ಮಾನವಸಮಸ್ಯೆಗಳನ್ನು ವಿಚಾರದ ಮೂಲಕ ಪರಿಹರಿಸಬೇಕೇ ಹೊರತು ಧಾರ್ಮಿಕ ನಂಬಿಕೆಗಳಿಂದಲ್ಲ ಎಂದು ನಂಬುವ ಒಂದು ತತ್ತ್ವಸಿದ್ಧಾಂತ. ಮಾನವನ ಮೂಲ ಸ್ವಭಾವ ಒಳ್ಳೆಯದೆಂದು ಅದು ಒತ್ತಿಹೇಳುತ್ತದೆ." (*Oxford Advanced Learners' Dictionary* ನೋಡಿ).

ಇದುವರೆಗೆ ನಾವು ನೋಡಿದಂತೆ ನಮ್ಮ ವ್ಯಕ್ತಿಗತ ಜೀವನದಲ್ಲಿ ಮತ್ತು ಸಾರ್ವತ್ರಿಕ ಜೀವನದಲ್ಲಿ ಅಸಂಖ್ಯ ಸಮಸ್ಯೆಗಳಿವೆ. ಈ ಜಗತ್ತಿನಲ್ಲಿ ಯಾರೂ ಸುಖಿವಾಗಿಲ್ಲ. ಎಲ್ಲರೂ ದುಃಖಿಗಳೇ. ಈ ಅನವರತ ದುಃಖಕ್ಕೆ ಒಂದೇ ಕಾರಣ: ನಮ್ಮ ಬಗ್ಗೆ ನಮಗಿರುವ ಅಜ್ಞಾನ. ಅಜ್ಞಾನದಿಂದಲೇ ನಾವು ನಾನಾ ಜಂಜಾಟಗಳಲ್ಲಿ ಸಿಕ್ಕಿ ನರಳುತ್ತಿರುವುದು. ಅಜ್ಞಾನ ಎಂದರೇನು? ಆತ್ಮನನ್ನು ಅರಿತವರಿಗೆ ಮಾತ್ರ ಶಾಶ್ವತ ಸುಖ; ಇತರರಿಗಲ್ಲ (**ತಮಾತ್ಮಸ್ಥಂ ಯೇऽನು ಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಂ ನೇತರೇಷಾಮ್**) ಎಂಬ ದೃಢವಾಕ್ಯವನ್ನು ಮತ್ತೆ ಮತ್ತೆ ಹೇಳಿದೆ ನಮ್ಮ ಧರ್ಮ. ನಮ್ಮೆಲ್ಲ ಸಂಕಟಗಳ ಮೂಲ ಈ ಅಂತಃಶಕ್ತಿಯ ಬಗೆಗಿರುವ ಅಜ್ಞಾನವೊಂದೇ. ಮೇಲೆ ಪ್ರಸ್ತಾಪಿಸಿದ ಮಾನವೀಯತೆಯ ಸಿದ್ಧಾಂತವು ಒಪ್ಪಿಕೊಳ್ಳುವ ಮಾನವನ ಸ್ವಾಭಾವಿಕ ಒಳ್ಳೆಯತನವು, ವಿವೇಕಾನಂದರ ಪ್ರಕಾರ, ಆಂತರಿಕ ದಿವ್ಯತೆಯ ಅಭಿವ್ಯಕ್ತಿ. ಆದ್ದರಿಂದ ಆಂತರಿಕ ದಿವ್ಯತೆಯ ಅಭಿವ್ಯಕ್ತಿಯೇ ಮಾನವನ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದಂದಾಯಿತು.

ಪ್ರತಿಯೊಂದು ದೇಶಕ್ಕೂ ವಿಶ್ವಕ್ಕೆ ನೀಡಬೇಕಾದ ಕೊಡುಗೆಯೊಂದಿರುತ್ತದೆ. ಪ್ರಾಪಂಚಿಕ ಸುಖ ಸೌಕರ್ಯಗಳಿಗಾಗಿ ವೈಜ್ಞಾನಿಕ ಪ್ರಗತಿ ಸಾಧಿಸುವುದು ವಿದೇಶಗಳ ಪ್ರಧಾನ ಕಾರ್ಯವಾದರೆ, ಭಾರತದ ಕಾರ್ಯ ಆಧ್ಯಾತ್ಮಿಕ ಉನ್ನತಿ ನೀಡುವುದು. ತಾನೇ ತನ್ನ ಆಧ್ಯಾತ್ಮಿಕತೆಯನ್ನು ಮರೆತಾಗ ಭಾರತವು ಯಾರಿಗೆ ಏನು ನೀಡಬಲ್ಲದು? 'ಉಪ್ಪು ತನ್ನ ಉಪ್ಪುತನವನ್ನು ಕಳೆದುಕೊಂಡರೆ ಎಲ್ಲಿಂದ ತಾನೇ ಉಪ್ಪುತನವನ್ನು ತರಲಾದೀತು?'(St. Matthew, 5.13). ಹಾಗಾಗಿ ಜಗತ್ತಿನ ಎಲ್ಲ ದುಃಖ, ಅಶಾಂತಿ, ಆತ್ಮಹತ್ಯೆ, ಯುದ್ಧ ಇತ್ಯಾದಿಗಳಿಗೂ ಭಾರತವೇ ಪರೋಕ್ಷವಾಗಿ ಹೊಣೆ ಯಾದಂತಾಯಿತು. ತಾಯಿಯೇ ಮಕ್ಕಳ ಲಾಲನೆ ಪಾಲನೆ ಮಾಡಬೇಕು. ತಾಯಿ ಆ ಕೆಲಸವನ್ನು ಮರೆತಾಗ, ಮಕ್ಕಳು ದುಷ್ಟರಾದರೆ ಯಾರು ಹೊಣೆ?

ಭಾರತದ ಕರ್ತವ್ಯ ಮಹತ್ತರವಾದುದು. ಪ್ರತಿಯೊಬ್ಬ ಭಾರತೀಯನೂ ಹೊಣೆಗಾರನಾಗಬೇಕು. ಬೇಜವಾಬ್ದಾರಿಯ ಜೀವನ ನಡೆಸಬಾರದು. ಈ ಹೊಣೆಗಾರಿಕೆಯನ್ನು ಮರೆತಾಗಲೇ ಸಂಕಟದ ಸರಮಾಲೆ. ಈ ಹೊಣೆಗಾರಿಕೆ ಮಾನವೀಯತೆಯ ಪ್ರಧಾನ ಲಕ್ಷಣ. ಮಾನವೀಯ ಮೌಲ್ಯಗಳಲ್ಲಿ ಇತರರಿಗೆ ನಮ್ಮ ಕರ್ತವ್ಯ ಪ್ರಧಾನ, ಇತರರಿಂದ ನಾವೇನು ಪಡೆಯಬೇಕೆಂಬುದು ಗೌಣ.

---

**ಭರತಖಂಡ ನಾಶವಾಗುವುದೆ ? ಆಗ ಪ್ರಪಂಚದಿಂದ ಆಧ್ಯಾತ್ಮಿಕತೆಯೆಲ್ಲ ನಾಶವಾಗುವುದು, ನೈತಿಕ ಉನ್ನತಿಯೆಲ್ಲ ನಿರ್ನಾಮವಾಗುವುದು... ಅದರ ಸ್ಥಳದಲ್ಲಿ ಕಾಮ ಮತ್ತು ಭೋಗ ಎಂಬ ಸ್ತ್ರೀಪುರುಷ ದೇವರು ಆಳುವರು.**

*—ಸ್ವಾಮಿ ವಿವೇಕಾನಂದ*

---

## ಮನುಷ್ಯತ್ವ ಮತ್ತು ದೈವತ್ವ

"ಯಾರ ಆಧ್ಯಾತ್ಮಿಕ ಚೇತನ ಜಾಗೃತವಾಗಿದೆಯೋ ಆತನು ಮಾತ್ರ ಯಾವಾಗಲೂ ಎಚ್ಚರದಿಂದಿರುತ್ತಾನೆ ಮತ್ತು ಅವನಲ್ಲಿ ಆತ್ಮಗೌರವವಿರುತ್ತದೆ. ಇಂತಹವನನ್ನು ಮಾತ್ರವೇ ಮಾನವನೆಂದು ಕರೆಯಬಹುದು. ಆಂತರಿಕ ಶಕ್ತಿಯನ್ನು ಎಚ್ಚರಿಸದ ವ್ಯಕ್ತಿಯ ಜನ್ಮ ವ್ಯರ್ಥ" (ಶ್ರೀರಾಮಕೃಷ್ಣ ವಚನವೇದ, 2.397). ಇದು ಶ್ರೀರಾಮಕೃಷ್ಣರ ವಾಣಿ. ನಾವು ಸಾಧಾರಣವಾಗಿ ಜಂಟಲ್‌ಮನ್‌ಗಳನ್ನು ನೋಡುತ್ತೇವೆ. ಈ ಜಂಟಲ್‌ಮನ್‌ಗಳಲ್ಲಿ ಹೆಚ್ಚಿನವರು ಟೊಳ್ಳು. ಒಳಗೇನೂ ಸಾರವಿರದು. ಸಾರ ಬರಬೇಕಾದರೆ ದೃಢವಾದ ಭೂಮಿಯ ಮೇಲೆ ನಿಲ್ಲಬೇಕು. ಆ ಭೂಮಿಯೇ ಆತ್ಮ. ಆತ್ಮಶಕ್ತಿಯನ್ನಾಧರಿಸಿ ನಿಂತಾಗಲೇ ನಮ್ಮ ಜೀವನದಲ್ಲಿ ಅರ್ಥ ಕಂಡುಕೊಳ್ಳಬಹುದು. ಆಗಲೇ ನಾವು ನಿಜವಾಗಿಯೂ ಮನುಷ್ಯರಾಗಬಹುದು.

ಮನುಷ್ಯತ್ವವೆಂದರೇನು ಹಾಗಾದರೆ? ದೈವತ್ವವೇ? ನಾವೆಲ್ಲರೂ ಮಾನವರು ನಿಜ, ಆದರೆ ಇದು ಬಾಹ್ಯದೃಷ್ಟಿಯಿಂದ ಮಾತ್ರ. ನಮ್ಮೊಳಗಿನ ದಿವ್ಯತೆಯನ್ನು ಬಹಿರಂಗಗೊಳಿಸುವುದೇ ಮನುಷ್ಯತ್ವ ಎಂದು ಹಿಂದೆಯೇ ಹೇಳಿದ್ದೇವೆ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಇತರ ಜೀವಗಳಿಗಿಂತಲೂ ಮನುಷ್ಯನಲ್ಲಿಯೇ ಭಗವಂತನ ಅತ್ಯಧಿಕ ಪ್ರಕಾಶವಿದೆ ಎಂಬುದು ನನಗೆ ಹೆಚ್ಚು ಹೆಚ್ಚಾಗಿ ಅರಿವಾಗುತ್ತಿದೆ." "ಭಗವಂತನೇ ಮಾನವರಾಗಿ ಲೀಲೆ ಮಾಡುವುದು. ಭಗವಂತನನ್ನು ಮಣ್ಣಿನ ಪ್ರತಿಮೆಯಲ್ಲಿ ಪೂಜಿಸಬಹುದಾದರೆ ಮಾನವನಲ್ಲಿ ಏಕೆ ಮಾಡಬಾರದು?" (ಶ್ರೀರಾಮಕೃಷ್ಣ ವಚನವೇದ 1.425)

## ವಿವೇಕಾನಂದರಲ್ಲಿ ಮಾನವೀಯತೆಯ ತುಡಿತ

ಇಲ್ಲಿಯೇ ನಮಗೆ ಸ್ವಾಮಿ ವಿವೇಕಾನಂದರ ಮಾನವೀಯತೆಯ ಪರಿಚಯವೂ ಸಿಗುವುದು. ಸ್ವಾಮಿ ವಿವೇಕಾನಂದರ ಮಾನವೀಯತೆಯನ್ನು ಎರಡು ಭಾಗಗಳಾಗಿ ನೋಡಬಹುದು. ಅವರ ಜೀವನದಲ್ಲಿ, ಮತ್ತು ಅವರ ಮಹತ್ತಾದ ವಾಣಿಯಲ್ಲಿ.

ಬಾಲ್ಯಕಾಲದಿಂದಲೇ ದೀನರೆಂದರೆ ಕರಗುತ್ತಿದ್ದರು ಸ್ವಾಮೀಜಿ. ಮನೆಯ ಬಟ್ಟೆಗಳನ್ನು ಗರೀಬರಿಗೆ ಕೊಡುತ್ತಿದ್ದರು. ಅವರ ದಯೆಯ ಬಗ್ಗೆ ಹಲವಾರು ಘಟನೆಗಳನ್ನು ಉಲ್ಲೇಖಿಸಬಹುದು. ಅವರ ಯೌವನದಲ್ಲಿ ಜೀವನದ ಏರುಪೇರುಗಳನ್ನು ಅನುಭವಿಸುವ ಅವಕಾಶ ಸಿಕ್ಕಿತು. ಒಂದು ಕಡೆ ಮನೆಯಲ್ಲಿ ವೈಭವದ

ಜೀವನವನ್ನು ನೋಡಿದರೆ ಮತ್ತೊಂದು ಕಡೆ ತಂದೆಯ ನಿಧನಾನಂತರದ ಸಂಕಟವನ್ನು ಎದುರಿಸಬೇಕಾಯಿತು. ನಂತರದ ಭಾರತ ಪರಿಭ್ರಮಣೆಯ ಕಾಲದಲ್ಲಂತೂ ಅವರು ಸ್ವಯಂ ಅನುಭವಿಸಿದ ಸಂಕಟಗಳಿಗೆ ಎಣೆಯೇ ಇರಲಿಲ್ಲ. ಅದರೊಂದಿಗೆ ದೇಶದ ವಿಡಂಬನೆಯನ್ನು ಅತ್ಯಂತ ಸುಸ್ಪಷ್ಟವಾಗಿ ಅನುಭವಿಸಿದರು. ಏನದು ವಿಡಂಬನೆ? ಒಂದೆಡೆ ಎಲ್ಲರೂ ಒಂದೇ, ಎಲ್ಲರಲ್ಲಿಯೂ ಪರಮಾತ್ಮನಿದ್ದಾನೆ ಎಂಬ ವೇದಾಂತದ ನುಡಿ, ಮತ್ತೊಂದೆಡೆ ಭೇದ, ಮೇಲು ಕೀಳೆಂಬ ಭಾವನೆ, ಇತ್ಯಾದಿಗಳ ತಾಂಡವ. ಜಾತಿ ಮತಗಳನ್ನು ಮರೆತು ಯಾರನ್ನು ಜನ ಕೀಳೆಂದರೋ ಅವರ ಕೈಗಳಲ್ಲಿಯೇ ಅನ್ನ ತಿಂದರು ವಿವೇಕಾನಂದರು. ನಂತರದ ವಿದೇಶಗಳ ಪರ್ಯಟನೆಯಿಂದ, ಭಾರತದ ಅನುಭವಗಳಿಂದ ಪಡೆದ ಶಿಕ್ಷಣವೇ ವಿವೇಕಾನಂದರನ್ನು ಮಾನವತೆಯ ಮಹಾನ್ ಪ್ರವಾದಿಯನ್ನಾಗಿ ಮಾಡಿದುದು. ಆಧ್ಯಾತ್ಮಿಕ ಅನುಭವ, ಬೌದ್ಧಿಕಪ್ರತಿಭೆ, ಸಮಸ್ತ ಮಾನವಕೋಟಿಗಾಗಿ ಪರಿತಪಿಸುವ ಹೃದಯವಂತಿಕೆ – ಇವೆಲ್ಲವುಗಳಿಂದ ಕೂಡಿದ ಪೂರ್ಣಮಾನವರಾಗಿದ್ದರು ವಿವೇಕಾನಂದರು. ವಿವೇಕಾನಂದರನ್ನು ಕಡಂಗೋಡ್ಲು ಶಂಕರಭಟ್ಟರು ವರ್ಣಿಸುವಂತೆ **"ವೇದರ್ಷಿಯ ಸುಬೋಧ, ಆತ್ಮದರ್ಶಿಯ ಶೋಧ, ಯೋಗಿಯನುಭೂತಿ, ಆತ್ಮದ ವಿಭೂತಿ ಪಾರ್ಥಿವದ ರೂಪಾದಂದು ಕಂಡುದೀ ರೀತಿ."**

## ಕರ್ಮಯೋಗದ ಪ್ರಾಧಾನ್ಯ

ಸ್ವಾಮಿ ವಿವೇಕಾನಂದರು ಎಲ್ಲ ಯೋಗಗಳಿಗೂ ಆದ್ಯತೆಯನ್ನು ನೀಡಿ ಯೋಗಸಮನ್ವಯವನ್ನು ಮಾಡಿ ಆಧ್ಯಾತ್ಮಿಕ ಸಾಧನಕ್ಷೇತ್ರಕ್ಕೆ ಒಂದು ವಿಶೇಷಕೊಡುಗೆಯನ್ನು ನೀಡಿರುವರು. ಆದರೂ ಮಾನವೀಯತೆಯ ದೃಷ್ಟಿಯಿಂದ ಅವರು ಕರ್ಮಯೋಗಕ್ಕೆ ಹೆಚ್ಚು ಒತ್ತನ್ನು ನೀಡಿರುವುದು ಪ್ರಧಾನ ಅಂಶ. ಅವರು ಕರ್ಮಯೋಗಕ್ಕೆ ಆಧುನಿಕ ಅವಶ್ಯಕತೆಗನುಗುಣವಾಗಿ ಹೊಸ ನಿರೂಪಣೆಯನ್ನು ನೀಡಿದರು. ಸಾಂಪ್ರದಾಯಿಕ ದೃಷ್ಟಿಯಲ್ಲಿ ಕರ್ಮಯೋಗವು ಚಿತ್ತಶುದ್ಧಿಗಾಗಿ ಮತ್ತು ಅದರ ಆತ್ಯಂತಿಕ ಗುರಿ ಭಗವತ್ ಸಾಕ್ಷಾತ್ಕಾರ. ವಿವೇಕಾನಂದರು ಅದಕ್ಕೆ ಒಂದು ಸಾಮಾಜಿಕ ಆಯಾಮವನ್ನಿತ್ತು ಅದನ್ನು ಸೇವಾತತ್ತ್ವವಾಗಿ ಪರಿವರ್ತಿಸಿದುದು ಅವರ ಒಂದು ವಿಶೇಷ ಕೊಡುಗೆ. ಅವರು ಹೇಳುತ್ತಾರೆ: " ಮಾನವಕೋಟಿಗೆ ಮತ್ತು ಜಗತ್ತಿಗೆ ಹೃತ್ಪೂರ್ವಕವಾಗಿ, ಸ್ವತಂತ್ರವಾಗಿ ಅರ್ಪಿಸಿದ ಕರ್ಮ ಮಾತ್ರ ಯಾವ ವಿಧವಾದ ಬಂಧನವನ್ನೂ ತರಲಾರದು.... ಪ್ರತಿಯೊಂದು ಕರ್ತವ್ಯವೂ ಪವಿತ್ರ. ಕರ್ತವ್ಯಪರಾಯಣತೆಯೇ ಶ್ರೇಷ್ಠ ಭಗವದುಪಾಸನೆ. ಬದ್ಧಜೀವಿಗಳನ್ನು, ಅಜ್ಞಾನದಲ್ಲಿ ನರಳುತ್ತಿರುವವರನ್ನು ಉದ್ಧರಿಸಲೆತ್ನಿಸುವುದು ಒಂದು ಮಹದುಪಕಾರವೇ ಸರಿ" (ಕೃತಿಶ್ರೇಣಿ 7.307). ಕರ್ಮಯೋಗದಿಂದ ಜಗತ್ತನ್ನು ಬದಲಿಸಲಾರೆವು, ನಿಜ. ಆದರೆ ಅದರಿಂದ ಜಗತ್ತಿಗೆ ಒಳಿತಾಗುವುದರಲ್ಲಿ ಸಂದೇಹವೇ ಇಲ್ಲ ಮತ್ತು ಜೊತೆಗೆ ನಾವೂ ಬದಲಾಗುತ್ತೇವೆ. ನಮ್ಮೊಳಗಿನ ಆತ್ಮಶಕ್ತಿ ಜಾಗೃತವಾಗುತ್ತದೆ. ನಾವು ಆತ್ಮವಾದರೆ ಎಲ್ಲರೂ ಆತ್ಮವೇ! ಹಾಗಾಗಿ ಭೇದ ಬುದ್ಧಿ ಹೋಗುತ್ತದೆ. ಐಕ್ಯತೆ ಬರುತ್ತದೆ. ಅಥವಾ, ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ, ನಾವು ಭಗವಂತನಲ್ಲಿ ವಿಶ್ವಾಸವಿಡದೆ ಇದ್ದರೂ ಇತರರಲ್ಲಿ ಒಂದು ಮಹತ್ ತತ್ತ್ವವಿದೆ ಎಂದು ನಂಬಿ ಅವರ ಸೇವೆ ಮಾಡಿದರೂ ಸಾಕು. ಅಥವಾ ನಮ್ಮೊಳಗಿನ ಆತ್ಮನಲ್ಲಿ ವಿಶ್ವಾಸವಿಟ್ಟರೂ ಸಾಕು. ಅದೂ ಅಸಾಧ್ಯವೇ? ಹಾಗಾದರೆ ಕೇವಲ ಮಾಡುವ ಕೆಲಸದ ಮೇಲೆ ಸಂಪೂರ್ಣ ಮನಸ್ಸಿಡೋಣ. ಇದಕ್ಕೆ ಧ್ಯಾನ ಪ್ರಕ್ರಿಯೆ ಎಂದು ಹೆಸರಿಡಬಹುದು. ಗುರಿಯೂ ಬೇಡ, ಫಲವೂ ಬೇಡ, ಕೀರ್ತಿಯೂ ಬೇಡ. ಒಂದು ಕೆಲಸದ ಪ್ರತಿಯೊಂದು ಹಂತವನ್ನು ಧ್ಯಾನಿಸುತ್ತಾ ಕೆಲಸ ಮಾಡಿದರೆ:

(೧) ಕೆಲಸ ನಿಸ್ಸಂದೇಹವಾಗಿ ಪರಿಪೂರ್ಣವಾಗುತ್ತದೆ, ಅದ್ಭುತವಾಗಿ ಆಗುತ್ತದೆ; (೨) ಮನಸ್ಸು ಏಕಾಗ್ರವಾಗಿ ಚಿತ್ತವೃತ್ತಿಗಳ ನಿರೋಧವಾಗುತ್ತದೆ; (೩) ಹತ್ತು ಜನ ಅಶಾಂತರು ಮಾಡುವ ಕೆಲಸವನ್ನು ಓರ್ವ ಶಾಂತವ್ಯಕ್ತಿ ಮಾಡಬಲ್ಲವನಾಗುತ್ತಾನೆ; (೪) ಸರ್ವತ್ರ ಉನ್ನತಿಯಾಗುತ್ತದೆ; (೫) ಮನುಷ್ಯ ನೈಜ ಮಾನವನಾಗುತ್ತಾನೆ.

ಹಿಂದೆ ಶಬ್ದಕೋಶದಲ್ಲಿನ ಮಾನವೀಯತೆಯ ಪರಿಭಾಷೆಯನ್ನು ಹೇಳಿದೆವು. ಮಾನವನ ಸಮಸ್ಯೆಗಳನ್ನು ಪರಿಹರಿಸುವಾಗ — ಧರ್ಮಕ್ಕಿಂತ ವಿಚಾರಕ್ಕೆ ಬೆಲೆ—ಎಂದು ಹೇಳಿದೆವು. ಸ್ವಾಮೀಜಿ ವಿಚಾರದ ಜೊತೆಗೆ ಕ್ರಿಯಾಪ್ರಧಾನ ಅಧ್ಯಾತ್ಮಕ್ಕೂ ಹೆಚ್ಚು ಒತ್ತನ್ನು ನೀಡಿದರು. ಇದೇ ಅವರು ಜಗತ್ತಿಗೆ ನೀಡಿದ ನೂತನ ಬೆಳಕು. ಜಾತಿ, ಕುಲ, ಗೋತ್ರ, ಧರ್ಮ—ಯಾವುದೇ ಇರಲಿ ವಿಶ್ವದಾದ್ಯಂತ ಎಲ್ಲರೂ ಮಾಡುವ ಕೆಲಸದ ಪ್ರತಿಯೊಂದು ಕಣಕಣವನ್ನೂ ಏಕಾಗ್ರಚಿತ್ತದಿಂದ ಮಾಡಿದರೆ ಜಗತ್ತಿನ ಕಲ್ಯಾಣವೂ ಆಗುತ್ತದೆ. ಆತ್ಮೋನ್ನತಿಯೂ ಆಗುತ್ತದೆ, ನಾವು ನಿಜವಾದ ಮಾನವತಾವಾದಿಗಳೂ ಆಗುತ್ತೇವೆ. ಇದೇ ಮಾನವೀಯತೆಯ ಆದರ್ಶ.

## ಕಡೆಯಲ್ಲಿ ಎರಡು ಮಾತು

ಮಾನವೀಯತೆಯ ಪ್ರಪ್ರಥಮ ಮತ್ತು ಸರ್ವಶ್ರೇಷ್ಠ ಮೌಲ್ಯ ಯಾವುದು? " ನೀವು ಮೊದಲು" ಎಂಬುದು. ಜಗತ್ತಿನ ಜನರೆಲ್ಲ ದುಃಖದಲ್ಲಿ ಬಳಲುತ್ತಿದ್ದಾರೆ. ಅವರಿಗೆ ಈಗ ಬೇಕಿರುವುದು ನಿಜವಾದ ಶಾಂತಿ. ಧರ್ಮೋಪದೇಶವೋ ತಾತ್ವಿಕತೆಯೋ ಅಲ್ಲ. ನಿಜವಾದ ಶಾಂತಿ ಹೊರಗೆಲ್ಲೂ ಸಿಗುವುದಿಲ್ಲ. ಇದು ಚಿರಂತನ ಸತ್ಯ. ನಮ್ಮೊಳಗೇ ಇದೆ ಶಾಂತಿ. ಇದನ್ನು ಆವಿಷ್ಕರಿಸಿ ಆಸ್ವಾದಿಸಬೇಕಾದರೆ ಕೃಷಿ ಮಾಡಬೇಕು. ಬೀಜವಿದೆ, ಮರವಾಗಬೇಕು. ಆ ಕೃಷಿಯೇ ಕೆಲಸ. ಕೆಲಸವನ್ನು ಸ್ವಾರ್ಥಕ್ಕಾಗಿಯೂ ಮಾಡಬಹುದು, ಇತರರ ಒಳಿತಿಗಾಗಿಯೂ ಮಾಡಬಹುದು. ಮಾನವನು ಪರಾರ್ಥಕ್ಕಾಗಿ ಏಕಾಗ್ರತೆಯಿಂದ ದುಡಿದರೆ ತಾನೂ ಚಿರಶಾಂತಿ ಪಡೆದು ಜಗತ್ತಿಗೂ ಶಾಂತಿ ನೀಡುತ್ತಾನೆ. ಇದರೊಂದಿಗೆ ಆತ್ಮಜಾಗ್ರತಿಯೂ ಆಗಬೇಕು. ಶ್ರೀರಾಮಕೃಷ್ಣರೆಂದಂತೆ ಯಾರ ಆತ್ಮಜಾಗೃತವಾಗಿದೆಯೋ ಅವನೇ ನೈಜ ಮಾನವ. ಅವನದೇ ಮಾನವೀಯತೆ. ●

ಸ್ಥಳದಾನ: ಶ್ರೀ ಅಶ್ವತ್ಥನಾರಾಯಣ ಜಿ.ಆರ್., ಚಾಮರಾಜನಗರ